ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ:06:2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು,ದಿನಾಂಕ:15.11.2021.

## ಸುತ್ತೋಲೆ

ವಿಷಯ: 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹಿಂಬಾಕಿ ಪಾವತಿಸಿರುವ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರಸಂಖ್ಯೆ:ಇಡಿ:147:ಹೆಚ್‌ಪಿಸಿ:2021,ದಿನಾಂಕ:24.09.2021.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು ಹಾಗೂ ಖಾಸಗಿ ಅನುದಾನಿತ ಪದವಿ /ಬಿ.ಎಡ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಬೋಧಕರು ತತ್ಸಮಾನ ವೃಂದದವರಿಗೆ 2006ರ 6ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ದಿನಾಂಕ 01.01.2006 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಮುಂದುವರೆದು ದಿನಾಂಕ 01.01.2006 ರಿಂದ 23.12.2009ರ ಅವಧಿಗೆ ಹಿಂಬಾಕಿ ಪಾವತಿಸಲು ಹಲವು ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

ಇಲಾಖಾ ವ್ಯಾಪ್ತಿಯ ಹಲವು ಬೋಧಕರು/ತತ್ಸಮಾನ ವೃಂದದವರು ಪೂರ್ಣ ಪ್ರಮಾಣದಲ್ಲಿ 2006ರ ಯುಜಿಸಿ ಹಿಂಬಾಕಿ ಪಾವತಿಯಾಗಿರುವುದಿಲ್ಲ ಎಂದು ನ್ಯಾಯಾಲಯದ ಮೊರೆ ಹೋಗುವುದು, ನ್ಯಾಯಾಲಯ ನಿಂದನಾ ಪ್ರಕರಣಗಳನ್ನು ದಾಖಲಿಸಿತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ದಿನಾಂಕ 01.01.2006 ರಿಂದ 23.12.2009ರ ಅವಧಿಗೆ ಈಗಾಗಲೇ ಪಾವತಿಸಿರುವ 2006 ಯುಜಿಸಿ ಹಿಂಬಾಕಿ ಮತ್ತು ಸದರಿ ಅವಧಿಗೆ ತುಟ್ಟಿಭತ್ಯೆ ಹೊರತುಪಡಿಸಿ ಪಾವತಿಸಬೇಕಾದ ಹಿಂಬಾಕಿಯ ವಿವರಗಳೊಂದಿಗೆ ಸರ್ಕಾರಕ್ಕೆ ಕ್ರೂಢೀಕೃತ ಪ್ರಸ್ತಾವನೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿದೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿನ ಬೋಧಕರು/ತತ್ಸಮಾನ ವೃಂದದವರ ಮಾಹಿತಿಯನ್ನು ಕಾಲೇಜಿನ ಪ್ರಾಂಶುಪಾಲರುಗಳು ಹಾಗೂ ಖಾಸಗಿ ಅನುದಾನಿತ ಪದವಿ/ಬಿ.ಎಡ್ ಕಾಲೇಜುಗಳಲ್ಲಿನ ಬೋಧಕರು/ತತ್ಸಮಾನ ವೃಂದದವರ ಮಾಹಿತಿಯನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳು ಸಲ್ಲಿಸುವಂತೆ ಸೂಚಿಸಲಾಗಿದೆ.

ಪ್ರಾಂಶುಪಾಲರುಗಳು/ಜಂಟಿ ನಿರ್ದೇಶಕರುಗಳು ವೈಯಕ್ತಿಕ ಗಮನಹರಿಸಿ ದಿನಾಂಕ 01.01.2006 ರಿಂದ 23.12.2009ರ ಅವಧಿಗೆ ಈಗಾಗಲೇ ಪಾವತಿಸಿರುವ 2006 ಯುಜಿಸಿ ಹಿಂಬಾಕಿ ಮತ್ತು ಸದರಿ ಅವಧಿಗೆ ತುಟ್ಟಿಭತ್ಯೆ ಹೊರತುಪಡಿಸಿ ಪಾವತಿಸಬೇಕಾದ 2006 ಯುಜಿಸಿ ಹಿಂಬಾಕಿಯ ವಿವರಗಳೊಂದಿಗೆ ಸಿಬ್ಬಂದಿವಾರು ಕ್ರೂಢೀಕೃತ ವರದಿಯನ್ನು ವಿಳಂಬಕ್ಕೆ ಆಸ್ಪದವಿಲ್ಲದಂತೆ ದಿನಾಂಕ: 24.11.2021ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ನ್ಯಾಯಾಲಯ ತೀರ್ಪು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅನಗತ್ಯ ವಿಳಂಬಕ್ಕೆ ಕಾರಣರಾದ ಅಧಿಕಾರಿ ಸಿಬ್ಬಂದಿಗಳನ್ನು ಗುರುತಿಸಿ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು.

ಅಡಕ: ನಿಗದಿತ ನಮೂನೆ

15/11/21

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1.ಇಲಾಖಾ ವ್ಯಾಪ್ತಿಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ/ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ.

2.ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.

d:\manjula2021-22\2006 ugc endorsement.docx

<u>ನಮೂನೆ</u>

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ಖಾಸಗಿ ಅನುದಾನಿತ ಪದವಿ/ಬಿಎಡ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಭೋದಕರು/ತತ್ಸಮಾನ ವೃಂದದವರಿಗೆ ದಿನಾಂಕ: 01.01.2006 ರಿಂದ 23.12.2009ರವರೆಗೆ 2006ರ 6ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಂತೆ ತುಟ್ಟಿಭತ್ಯೆ ಹೊರತುಪಡಿಸಿ ಪಾವತಿಸಬೇಕಾಗಿರುವ ಹಿಂಬಾಕಿ ವಿವರ.

| ಕ್ರಮ ಸಂಖ್ಯೆ | ಸಿಬ್ಬಂದಿಯ ಹೆಸರು & ಪದನಾಮ | ಕಾಲೇಜಿನ ಹೆಸರು | 01.01.2006 ರಿಂದ 23.12.2009ರ ವರೆಗೆ ಪಾವತಿಸಿರುವ ಒಟ್ಟು ಹಿಂಬಾಕಿ | 01.01.2006 ರಿಂದ 23.12.2009ರ ವರೆಗೆ ತುಟ್ಟಿಭತ್ಯೆ ಹೊರತು ಪಡಿಸಿ ಪಾವತಿಸಬೇಕಾದ ಒಟ್ಟು ಹಿಂಬಾಕಿ | ಷರಾ (ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಬಗ್ಗೆ ಮಾಹಿತಿ ನೀಡುವುದು. |
|---|---|---|---|---|---|
| | | | | | |

d:\manjula2021-22\2006 ugc endorsement.docx